ಯೊಳಗೆ ಹೆರಿಗೆ ಆಸ್ಪತ್ರೆಯಲ್ಲಿ ಹೆಣ್ಣುಮಕ್ಕಳು ಡಾಕ್ಟರ್ಸ್ ಇಲ್ಲದಿದ್ದರೆ, ಎಂದರೆ ಮಹಿಳಾ ವೈದ್ಯರು ಇಲ್ಲದಿದ್ದರೆ ಅವರ ಗತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಮಹಿಳಾ ವೈದ್ಯರ ಆವಶ್ಯಕತೆ ಆಲ್ಲಿ ಅತ್ಯವಶ್ಯಕವಾಗಿರುತ್ತದೆ. ನೀವು ಸ್ನಾತಕೋತ್ತರ ಶಿಕ್ಷಣಕ್ಕೆ ಓಳ ಮುಂದಿಯನ್ನು ಕಳುಹಿಸುವಾಗ ಏನಾದರೂ ಬೇರೆ ವ್ಯವಸ್ಥೆ ಮಾಡಬೇಕಾಗಿತ್ತು. ಆಲ್ಲಿನ ಹೆಣ್ಣು ಮಂಕ್ಕಳಿಗೆ ತುಂಬಾ ತೊಂದರೆಯಾಗಿದೆ. ಇಷ್ಟೊಂದು ಜನ ಮಹಿಳಾ ವೈದ್ಯರು ಇಲ್ಲದಿದ್ದರೆ ಗ್ರಾಮಾಂತರ ಪ್ರದೇಶಗಳಲ್ಲಿನ ಆಸ್ಪತ್ರೆಯಲ್ಲಿ ಹೆಣ್ಣು ಮಕ್ಕಳ ಗತಿ ಏನು?

ಶ್ರೀ ಎಚ್. ಎಲ್. ತಿಮ್ಮೇಗೌಡ.—ವೈದ್ಯರುಗಳನ್ನು ನೇಮಕ ಮಾಡುವಾಗ ಮಹಿಳಾ ವೈದ್ಯರು ಇಷ್ಟು, ಪುರುಷ ವೈದ್ಯರು ಇಷ್ಟು ಎಂದು ನಾವು ಮಾಡಿರಲಿಲ್ಲ. ವಿಶೇಷವಾಗಿ ೧೦೦ ಜನ ಮಹಿಳಾ ವೈದ್ಯರನ್ನು ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಕರೆದಿದ್ದೇವೆ. ನೇಮಕ ಆಗಬಹುದು. ಅರ್ಜಿ ಕರೆಯುವಾಗ ಐದು ವರ್ಷಗಳ ತನಕ ಆವರು ಹಳ್ಳಿಗಳಲ್ಲಿ ಸೇವೆ ಮಾಡಬೇಕು ಮತ್ತು ಐದು ವರ್ಷಗಳ ತನಕ ಆವರು ಸ್ನಾತ್ತಕೋತ್ತರ ಶಿಕ್ಷಣಕ್ಕೂ ಹೋಗುವಂತಿಲ್ಲ. ಎಂದು ಕಂಡೀಷನ್ ಹಾಕಿ ಮಾಡಿದ್ದೇವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಹಿಳಾ ವೈದ್ಯರು ಇರತಕ್ಕಂಥಾದ್ದು ಮತ್ತು ಹಳ್ಳಿಯಲ್ಲಿನ ಹೆರಿಗೆ ಆಸ್ಪತ್ರೆಗಳಲ್ಲಿಯೂ ಮಹಿಳಾ ವೈದ್ಯರು ಇದ್ದಾರೆ, ಕೆ.ಪಿ.ಎಸ್.ಸಿ.ಯವರು ಈ ಆಯ್ಕೆಯನ್ನು ಮಾಡತಕ್ಕವರು. ಖಾಲಿ ಇರತಕ್ಕ ಜಾಗಗಳಿಗೆ ಸೂಕ್ತವಾದ ಆಯ್ಕೆ ಆಗುವವರೆಗೆ ರಿಟೈರ್ಡ್ ಆದಂಥವರನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದ್ದೇವೆ. ಮಹಿಳಾ ವೈದ್ಯರು ಹಳ್ಳಿಯ ಆಸ್ಪತ್ರೆಗಳಲ್ಲಿ ಇರಲೇ ಬೇಕೆಂಬುದು ಸರಕಾರದ ಸದಿಚ್ಛೆ.

ಶ್ರೀ ಮತಿ ಲೀಲಾದೇವಿ ಆರ್. ಪ್ರಸಾದ್.—ಅಧ್ಯಕ್ಷರೇ, ಚಿಕ್ಕ ವಯಸ್ಸಿನ ಮಹಿಳಾ ವೈದ್ಯೆಯರು ಹಳ್ಳಿಗಳಿಗೆ ಹೋಗುವುದಕ್ಕೆ ಇಚ್ಛೆಪಡುವುದಿಲ್ಲ ಎಂದ ಮೇಲೆ ರಿಟೈರ್ಡ್ ಆದವರು ಆಲ್ಲಿಗೆ ಹೋಗುತ್ತಾರೆಯೇ?

ಶ್ರೀ ಎಚ್. ಎಲ್. ತಿಮ್ಮೇಗೌಡ.—ವೈದ್ಯರುಗಳು ಹಳ್ಳಿಗಳಿಗೆ ಹೋಗತಕ್ಕಂತಹ ವಿಷಯ ವಯಸ್ಸಿನ ಮೇಲೆ ಅವಲಂಬಿಸಿರುವುದಿಲ್ಲ. ಎಲ್ಲರೂ ಹೋಗುತ್ತಾರೆ. ನಾವು ನೇಮಕ ಮಾಡುವಾಗಲೇ ಆ ಕಂಡೀಷನ್ ಹಾಕಿ ನೇಮಕ ಮಾಡುತ್ತೇವೆ. ಮೊದಲನೆಯ ಐದು ವರ್ಷಗಳ ಸೇವೆಯನ್ನು ವೈದ್ಯರು ಹಳ್ಳಿಗಳಲ್ಲಿಯೇ ಮಾಡಬೇಕೆಂದು ಮಾಡಿದ್ದೇವೆ.

ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ ೩೭೭ (೨೨೩) ಸದಸ್ಯರು ಹಾಜರಿಲ್ಲ.

ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ ೩೭೮ (೬೪೧) ಸದಸ್ಯರು ಹಾಜರಿಲ್ಲ.

ಕೊಡಚಾದ್ರಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು

೫೭೬. ಶ್ರೀ ಪಟವಂಕಿ ರತ್ನಾಕರ (ತೀರ್ಥಹಳ್ಳಿ).— ಮಾನ್ಯ ವಾರ್ತಾ ಯುವಜನ ಸೇವೆ ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸನಗರ ತಾಲ್ಲೂಕಿನ ಕೊಡಚಾದ್ರಿ ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಬಗ್ಗೆ ಸರ್ಕಾರದವರು ಪರಿಶೀಲಿಸುತ್ತಿರುವರೇ?

ಆ) ಹಾಗಿದ್ದಲ್ಲಿ ಅದರ ಬಗ್ಗೆ ಕೈಗೊಳ್ಳಲಾಗಿರುವ ಕ್ರಮಗಳೇನು?

ಶ್ರೀ ಜೀವರಾಜ ಆಳ್ವಾ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆ ಕನ್ನಡ ಮತ್ತು ಸಂಸ್ಕೃತಿ ಹಾಗೂ ಕ್ರೀಡಾ ರಾಜ್ಯ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಪಟವಂಕಿ ರತ್ನಾಕರ್.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 'ಇಲ್ಲ' ಮತ್ತು 'ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು' ತಿಳಿಸಿದ್ದಾರೆ. ಸ್ವಾಮಿ ಈಗ ನಾನು ಕೇಳಿರುವ ತಕ್ಕಂಥ ಪ್ರಶ್ನೆ ಬಹಳ ಗಂಭೀರವಾದುದು ಮತ್ತು ಗಮನಾರ್ಹವಾದುದು. ಮಲೆನಾಡು ಪ್ರದೇಶ

ದಲ್ಲಿರತಕ್ಕಂಥ ಈ ಕೊಡಚಾದ್ರಿಪ್ರದೇಶಕ್ಕೆ ಮಾನ್ಯ ಮಂತ್ರಿಗಳೇ ಖುದ್ದಾಗಿ ಭೇಟಿ ಕೊಟ್ಟು ಪರಿಶೀಲನೆ ಮಾಡಿ ಯೋಚನೆ ಮಾಡುತ್ತೇನೆ ಎನ್ನುವ ಉತ್ತರವನ್ನಾದರೂ ಕೊಡುತ್ತಾರೆಂದು ನಾನಂ ತಿಳಿದಿದ್ದೆ ಆದರೆ ಮಾನ್ಯ ಮಂತ್ರಿಗಳು ಆ ರೀತಿ ಹೇಳದೆ ಒಂದೇ ಭಾರಿಗೆ ಉದ್ಭವಿಸುವುದಿಲ್ಲವೆಂದು ತಿಳಿಸಿದ್ದಾರೆ ಆದ್ದರಿಂದ ಇನ್ನೊಂದು ಸಾರಿಯಾದರೂ ಯೋಚನೆ ಮಾಡಿ ಉತ್ತರ ಕೊಡುತ್ತಾರೆಯೇ ?

ಶ್ರೀ ಜೀವರಾಜ್ ಆಳ್ವ.—ಮಾನ್ಯ ಅಧ್ಯಕ್ಷರೇ ಹೊಸನಗರ ತಾಲ್ಲೂಕಿನ ಕೊಡಚಾದ್ರಿ ಪ್ರದೇಶವನ್ನು ನಾನೂ ಸಹ ನೋಡಿದ್ದೇನೆ. ಅದು ಒಂದು ಸುಂದರವಾದ ಪ್ರದೇಶ. ಮತ್ತು ರಮ್ಯವಾದ ಸ್ಥಳ ಕೂಡ ಆಗಿದೆ. ಇದನ್ನು ಒಂದು ಗಿರಿಧಾಮವನಾ ಗಿ ಮಾಡಬೇಕೆನ್ನುವ ಆಸೆ ನಮಗೂ ಕೂಡ ಇದೆ. ಆದರೆ ಮಾನ್ಯ ಸಚಿವರಾದಂಥ ಅಬ್ದುಲ್ ನಜೀರ್ ಸಾಹೇಬರು ಕೂಡ ಈ ಬಗ್ಗೆ ಒಂದು ಬೇಡಿಕೆಯನ್ನು ಇಟ್ಟಿದ್ದಾರೆ, ಆದ್ದರಿಂದ ಮಾನ್ಯ ಸಚಿವರು ರೂರಲ್ ಡೆವಲಪ್‌ಮೆಂಟ್ ಯೋಜನೆಯ ಅನ್ವಯ ಅಲ್ಲಿಗೆ ಒಂದು ರಸ್ತೆಯನ್ನು ಮಾಡಿಸಿ ಕೊಟ್ಟರೆ, ಮತ್ತು ವಾಹನ ಸಂಚಾರಕ್ಕೆ ಸೌಕರ್ಯವನ್ನು ಮಾಡಿಸಿ ಕೊಟ್ಟರೆ ಮತ್ತು ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಹಣ ಬಂದ ತಕ್ಷಣ ಅದನ್ನು ಸುಂದರ ಗಿರಿಧಾಮವನ್ನಾಗಿ ಮಾಡಲಾಗುವುದೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ ಈ ಉತ್ತರವನ್ನು ನಾನು ಮೊದಲೇ ಮಾನ್ಯ ಸಚಿವರಿಂದ ನಿರೀಕ್ಷೆ ಮಾಡಿದ್ದೆ. ಮಾನ್ಯ ಮಂತ್ರಿಗಳಾದ ಅಬ್ದುಲ್ ನಜೀರ್ ಸಾಹೇಬರು ಕೂಡ ಸ್ವಾಮೀಜಿಗಳ ಜೊತೆಯಲ್ಲಿ ಮಾತನಾಡಿ ಬಂದಿದ್ದಾರೆ. ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಅಲ್ಲಿಗೆ ಒಂದು ರಸ್ತೆಯನ್ನು ಮಾಡಿಸಿಕೊಟ್ಟರೆ ಒಳ್ಳೆಯದು.

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಯೋಜನೆಯ ಅನ್ವಯ ನಾನು ಈಗಾಗಲೇ ೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇನೆ. ಲ್ಯಾಂಡ್ ಆರ್ಮಿ ಏಜೆನ್ಸಿಯ ಮುಖಾಂತರ ಅಲ್ಲಿ ರಸ್ತೆ ಕೆಲಸವನ್ನು ಮಾಡಿಸಿಕೊಡಲಾಗುವುದು. ಬಹುಶಃ ಅಲ್ಲಿ ಈಗಾಗಲೇ ರಸ್ತೆ ಕೆಲಸ ಪ್ರಾರಂಭವಾಗಿರಬಹುದು.

ನರಸಿಂಹಗಡವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು.

೩೯೧. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ವಾರ್ತಾ ಯುವಜನ ಸೇವಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನ ನರಸಿಂಹಗಡವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಲು ತೀರ್ಮಾನಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಮೇಲ್ಕಂಡ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು.

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಕ್ರೀಡಾ ರಾಜ್ಯ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ವಸಂತ ಬಂಗೇರ.—ಸನ್ಮಾನ್ಯ ಅಧ್ಯಕ್ಷರೇ ನಿರಂತರವಾಗಿ ಈ ಸದನದಲ್ಲಿ ಬರತಕ್ಕಂಥ ಉತ್ತರಗಳು 'ಇಲ್ಲ' ಎಂದು, 'ಉದ್ಭವಿಸುವುದಿಲ್ಲ'ವೆಂದು, ಅಥವಾ 'ಪರಿಶೀಲನೆ ಮಾಡಲಾಗುವುದೆಂದು' 'ಮತ್ತು 'ಪರಿಶೀಲನೆಯಲ್ಲಿ ಇದೆ' ಎಂದು. ಸ್ವಾಮಿ ಈ ಪ್ರಶ್ನೆಯನ್ನು ನಾನು ಹಿಂದಿನ ಸಾರಿ ಕೇಳಿದಾಗ ಮಾನ್ಯ ಪ್ರವಾಸೋದ್ಯಮ ಸಚಿವರು ಮಾತನಾಡುತ್ತಾ ಮುಂದಿನ ವರ್ಷದಲ್ಲಿ ಈ ಕೆಲಸವನ್ನು ಕಾರ್ಯಗತ ಮಾಡಲಾಗುವುದೆಂದು ಉತ್ತರವನ್ನು ನೀಡಿದ್ದರು. ಆದರೆ ಈಗ ಮಾನ ಸಚಿವರು 'ಉದ್ಭವಿಸುವುದಿಲ್ಲವೆಂದು ಉತ್ತರ ಹೇಳಿದ್ದಾರೆ.

ಅಧ್ಯಕ್ಷರು.—ಸ್ವಾಮಿ ತಾವು ನೇರವಾಗಿ ಪ್ರಶ್ನೆಯನ್ನು ಕೇಳಿ,